# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :934
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಮಂಗಳೂರು ನಗರದಲ್ಲಿರುವ ಕೆ.ಎಸ್.ಆರ್.ಟಿ.ಸಿಯ ಪ್ರಸ್ತುತ ನಿಲ್ದಾಣದಿಂದ ಬೇರೆ ಬಸ್ ನಿಲ್ದಾಣಗಳಿಗೆ ಸಂಚರಿಸುವ ಬಸ್ ಸಂಚಾರದ ವಿಸ್ತರಣೆಯು ಯಾವ ಹಂತದಲ್ಲಿದೆ: ಮಂಗಳೂರು ನಗರದಲ್ಲಿರುವ ಬಸ್ ನಿಲ್ದಾಣದಿಂದ ಸಂಚರಿಸುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು: (ವಿವರ ನೀಡುವುದು); | ಮಂಗಳೂರು ನಗರದಲ್ಲಿರುವ ಬಸ್ ನಿಲ್ದಾಣದಿಂದ ವಿವಿಧ ಸ್ಥಳಗಳಿಗೆ ಪ್ರತಿ ನಿತ್ಯ 631 ನಿರ್ಗಮನಗಳಿದ್ದು, ವಲಯವಾರು ನಿರ್ಗಮನಗಳ ವಿವರವನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| ಆ. | ಮಂಗಳೂರು ನಗರದ ಬಿಜ್ಜೈನಲ್ಲಿರುವ ಬಸ್ ನಿಲ್ದಾಣವನ್ನು ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಇದ್ದರೆ ಯಾವ ಹಂತದಲ್ಲಿದೆ: (ವಿವರ ನೀಡುವುದು); | ಪ್ರಸ್ತುತ ಕ.ರಾ.ರ.ಸಾ.ನಿಗಮದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರದ ಹಿನ್ನೆಲೆಯಲ್ಲಿ ಮಂಗಳೂರು ನಗರದ ಬಿಜ್ಜೈನಲ್ಲಿರುವ ಬಸ್ ನಿಲ್ದಾಣವನ್ನು ಉನ್ನತೀಕರಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. |
| ಇ. | ಮಂಗಳೂರು ವಿಭಾಗಕ್ಕೆ ಸೇರಿದ ಅನೇಕ ರಸ್ತೆಗಳಲ್ಲಿ ಖಾಸಗಿ ಬಸ್ಸುಗಳ ಸಂಚಾರವೇ ಹೆಚ್ಚಾಗಿದ್ದು, ಶಕ್ತಿ ಯೋಜನೆ ಉಪಯೋಗ ಪಡೆಯಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು); | ಶಕ್ತಿ ಯೋಜನೆ ಜಾರಿಗೆ ಬಂದ ನಂತರ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯು ಗಣನೀಯವಾಗಿ ಹೆಚ್ಚಳವಾಗಿದ್ದು, ಪ್ರಯಾಣಿಕರ ದಟ್ಟಣೆ/ಬೇಡಿಕೆಗಳಿಗೆ ಅನುಗುಣವಾಗಿ 51 ಅನುಸೂಚಿಗಳಿಂದ 273 ಏಕ ಸುತ್ತುವಳಿಗಳನ್ನು ಹೊಸದಾಗಿ ಪ್ರಾರಂಭಿಸಲಾಗಿರುತ್ತದೆ ಮತ್ತು ಕೋವಿಡ್-19 ಹಿನ್ನೆಲೆಯಲ್ಲಿ ಸ್ಥಗಿತಗೊಳಿಸಿದ್ದ 107 ಏಕ ಸುತ್ತುವಳಿಗಳನ್ನು ಪುನಃ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಮಂಗಳೂರು ನಗರ/ಗ್ರಾಮಾಂತರ ವ್ಯಾಪ್ತಿಯಲ್ಲಿ 44 ನಗರ ಸಾರಿಗೆ ಅನುಸೂಚಿಗಳಿಂದ 464 ಏಕ ಸುತ್ತುವಳಿಗಳು, 96 ಸಾಮಾನ್ಯ ಅನುಸೂಚಿಗಳಿಂದ 526 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ (26 ಮಂಗಳೂರು-ಕಾಸರಗೋಡು ಮಾರ್ಗದ ಅಂತರ ರಾಜ್ಯ ಸಾರಿಗೆಗಳನ್ನು ಒಳಗೊಂಡಂತೆ).<br><br>ಅಲ್ಲದೇ, ಬೇಡಿಕೆಗನುಗುಣವಾಗಿ 25 ಹೊಸ ಮಾರ್ಗಗಳಲ್ಲಿ ಸಾರಿಗೆಗಳ ಕಾರ್ಯಾಚರಣೆಗೆ ಪರವಾನಗಿ ಮಂಜೂರಾತಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ದಿನಾಂಕ:18-08-2025ರಂದು ನಡೆದ ಮಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ 16 ಮಾರ್ಗಗಳಲ್ಲಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಪರವಾನಗಿಗಳು ಮಂಜೂರಾಗಿರುತ್ತವೆ.<br><br>ಸದರಿ ಮಾರ್ಗಗಳಲ್ಲಿ ಸಾರಿಗೆಗಳ ಕಾರ್ಯಾಚರಣೆಗೆ ವಾಹನಗಳ ಅವಶ್ಯಕತೆ ಇದ್ದು, ವಾಹನ ಬಲಕ್ಕೆ ನೂತನ ವಾಹನಗಳು ಸೇರ್ಪಡೆಗೊಂಡ ನಂತರ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕ್ರೋಢೀಕರಿಸಿಕೊಂಡು ಸಾರಿಗೆ ಸೌಲಭ್ಯ ಕಲ್ಪಿಸುವ ಸಂಬಂಧ ಆದ್ಯತೆಯ ಮೇರೆಗೆ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 32 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

"ಅನುಬಂಧ –ಅ"

ಮಂಗಳೂರು ಬಸ್ಸು ನಿಲ್ದಾಣದಿಂದ ನಿರ್ಗಮನವಾಗುತ್ತಿರುವ ವಲಯವಾರು ಸಾರಿಗೆಗಳ ವಿವರ:

| ಕ್ರ.ಸಂ | ವಲಯ | ಒಟ್ಟು ನಿರ್ಗಮನಗಳು |
|---|---|---|
| 1 | ಉಡುಪಿ/ಹುಬ್ಬಳ್ಳಿ | 132 |
| 2 | ಹಾಸನ/ಬೆಂಗಳೂರು | 85 |
| 3 | ಉಪ್ಪಿನಂಗಡಿ/ಸುಬ್ರಹ್ಮಣ್ಯ | 29 |
| 4 | ಮಡಿಕೇರಿ/ಮೈಸೂರು | 62 |
| 5 | ಉಡುಪಿ/ಶಿವಮೊಗ್ಗ | 14 |
| 6 | ಧರ್ಮಸ್ಥಳ | 53 |
| 7 | ಚಿಕ್ಕಮಗಳೂರು/ದಾವಣಗೆರೆ | 27 |
| 8 | ದೇರಳಕಟ್ಟೆ | 14 |
| 9 | ಮಂಗಳೂರು ನಗರ | 74 |
| 10 | ಬಿ ಸಿ ರೋಡು | 20 |
| 11 | ಕಾರ್ಕಳ | 10 |
| 12 | ಕಾಸರಗೋಡು | 109 |
| 13 | ಮೈಸೂರು | 1 |
| 14 | ಎರ್ನಾಕುಲಂ | 1 |
| | | **631** |

ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ)